ದಿನಾಂಕ 18.05.2016ರಿಂದ 24.05.2016ರವರೆಗೆ ನಡೆಯಲಿರುವ ಶುಶ್ರೂಷಕರ ಹುದ್ದೆಯ ನೇಮಕಾತಿ ಸಂಬಂಧ ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸೂಚನೆಗಳು

---

1) ಶುಶ್ರೂಷಕರ ಹುದ್ದೆಗೆ ಅರ್ಜಿ ಸಲ್ಲಿಸುವ ದಿನಾಂಕಕ್ಕಿಂತ ಒಂದು ವರ್ಷ ಹಿಂದೆ ವಿವಾಹಿತರಾಗಿರುವ ಮಹಿಳೆಯರು ಕಡ್ಡಾಯವಾಗಿ ಅವರ ಪತಿಯ ಕುಟುಂಬದ ಆಧಾಯ ದೃಢೀಕರಣ ಪತ್ರವನ್ನು ಸಲ್ಲಿಸಬೇಕು;

2) ನರ್ಸಿಂಗ್ ರಿಜಿಸ್ಟ್ರೇಷನ್ ದೃಢೀಕರಣ ಪತ್ರವನ್ನು ಕರ್ನಾಟಕದ ಡಿಪ್ಲೊಮಾ ನರ್ಸಿಂಗ್ ಕೌನ್ಸಿಲ್‌ನಿಂದ ನೊಂದಾಯಿಸಿ, ಅದನ್ನು ನವೀಕರಿಸಿರಬೇಕು;

3) ಕನ್ನಡ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ಕಡ್ಡಾಯವಾಗಿ ಅವರು ಅಭ್ಯಾಸ ಮಾಡಿರುವ ಶಾಲೆಯ ಪ್ರಾಂಶುಪಾಲರಿಂದ ನಿಗಧಿತ ನಮೂನೆಯಲ್ಲಿ ವ್ಯಾಸಂಗ ಪ್ರಮಾಣ ಪತ್ರವನ್ನು ಪಡೆದು ಅದನ್ನು ಆಯಾ ತಾಲ್ಲೂಕಿನ ಕ್ಷೇತ್ರಶಿಕ್ಷಣಾಧಿಕಾರಿಯವರಿಂದ ಮೇಲುರುಜು ಪಡೆದು ಸಲ್ಲಿಸಬೇಕು;

4) ದಿನಾಂಕ. 13.04.2016 ರಿಂದ 18.04.2016ರವರೆಗೆ ನಡೆದ ಬಿ.ಎಸ್‌ಸಿ ನರ್ಸಿಂಗ್ ದಾಖಲೆ ಪರಿಶೀಲನೆ ಸಮಯದಲ್ಲಿ 40 ಅಂಕಗಳು ಅಥವಾ ಅದಕ್ಕಿಂತ ಹೆಚ್ಚು ಅಂಕಗಳು ಗಳಿಸಿರುವ ಅರ್ಹ ಅಭ್ಯರ್ಥಿಗಳು ದಾಖಲೆ ನೀಡದೇ ಇದ್ದಲ್ಲಿ 18.05.2016 ರಿಂದ 24.05.2016ರವರೆಗೆ ಸಲ್ಲಿಸಬಹುದು;

5) ಬಿ.ಎಸ್‌ಸಿ ಮತ್ತು ಡಿಪ್ಲೊಮಾ ಎರಡು ಅರ್ಹತೆ ಹೊಂದಿದ್ದು ಡಿಪ್ಲೊಮ ನರ್ಸಿಂಗ್ ಹುದ್ದೆಗೆ 50 ಅಂಕಗಳು ಅಥವಾ ಅದಕ್ಕಿಂತ ಹೆಚ್ಚಿಗೆ ಅಂಕಗಳನ್ನು ಗಳಿಸಿರುವ ಅಭ್ಯರ್ಥಿಗಳು ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲನೆ ಮಾಡದೇ ಇದ್ದಲ್ಲಿ ಅವರೂ ಕೂಡ 24.05.2016ರೊಳಗೆ ಸಲ್ಲಿಸಬಹುದು.

*************